**M.V.C.No.1656/2023**
**PW1**

**M.V.C.No.1656/2023**
**PW1**

ದಿನಾಂಕ 18.02.2026 ರಂದು ಸಾಕ್ಷಿಯನ್ನು ಕರೆಸಿ ವಿಧಿಬದ್ಧವಾದ ಪ್ರಮಾಣವಚನ ಭೋಧಿಸಲಾಯಿತು.

ಮುಂದುವರಿದ ಮುಖ್ಯ ವಿಚಾರಣೆಃಅರ್ಜಿದಾರರ ಪರ ಶ್ರೀ ಪಿ.ಕೆ.ಪಿ ವಕೀಲರಿಂದಃ

NO claim certificate ಅನ್ನು ನಿಪಿ-**13** ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ 2ನೇ ಎದುರುದಾರರ ಪರ ಶ್ರೀ ಯು.ಎಸ್.ಎನ್ ವಕೀಲರಿಂದಃ

ಅಪಘಾತಕ್ಕೀಡಾದ ಆಂಬ್ಯುಲೆನ್ಸ್ ಕೆ.ವಿ.ಜಿ ಸಂಸ್ಥೆಗೆ ಸೇರಿದ್ದು, ನಾನು ಕಳೆದ 10 ವರ್ಷಗಳಿಂದ ಅಲ್ಲಿ ಚಾಲಕನಾಗಿ ಕೆಲಸ ಮಾಡುತ್ತಿದ್ದೇನೆ. ಅಪಘಾತ ಸಮಯದಲ್ಲಿ

ಆಂಬ್ಯುಲೆನ್ಸ್ ನಲ್ಲಿ ರೋಗಿ ಸಹ ಇದ್ದರು. ಅಪಘಾತ ಇಳಿಮುಖವಾದ ರಸ್ತೆಯಲ್ಲಿ ಆಗಿರುತ್ತದೆ ಎಂದರೆ ಸರಿ. ಟಿಪ್ಪರ್ ಲಾರಿ ರಸ್ತೆಯ ಬದಿಯಲ್ಲಿ ನಿಲ್ಲಿಸಿದ್ದು ಒಮ್ಮೆಲೇ ಡಾಂಬಾರು ರಸ್ತೆಯ ಬಲಗಡೆಗೆ ತಿರುಗಿಸಿರುತ್ತಾರೆ. ಅಪಘಾತ ಸಮಯದಲ್ಲಿ ರಾಷ್ಟ್ರೀಯ ಹೆದ್ದಾರಿ 275 ರ ಕಾಮಗಾರಿ ನಡೆಯುತ್ತಿತ್ತು ಎಂದರೆ ಸರಿ. ಅಪಘಾತ ನನ್ನ ತಪ್ಪಿನಿಂದ ಆಗಿರುತ್ತದೆ ಎಂದರೆ ಸರಿಯಲ್ಲ.

ನಿಪಿ-1ನ್ನು ಅಪಘಾತವಾದ ಮಾರನೇ ದಿನ ವಾಹನವನ್ನು ಬಿಡುಗಡೆ ಪಡೆಯುವ ಕುರಿತು ಮತ್ತು ಅಪಘಾತ ಕುರಿತು ಪ್ರಕರಣ ನಡೆಸುವ ಕುರಿತು ನೀಡಿರುತ್ತಾರೆ. ಸ್ಟಾಂಪ್ ಪೇಪರನ್ನು ದಿ. 18.7.2023 ರಂದು ಪಡೆದುಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಿಪಿ-1ನ್ನು ನಾನು ಪ್ರಕರಣಕ್ಕಾಗಿ ನಮ್ಮ ಸಂಸ್ಥೆಯವರು ಪೋರ್ಜರಿ ಮಾಡಿ ಹಾಜರು ಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-1ರ ಆಧಾರದ ಮೇರೆಗೆ ಸಾಕ್ಷಿ ಹೇಳಲು ನನಗೆ ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ.

ಆಂಬ್ಯುಲೆನ್ಸನ್ನು ಕೇರಳದ ಕಣ್ಣೂರಿನಲ್ಲಿ ರಿಪೇರಿ ಮಾಡಿಸಿರುತ್ತೇನೆ. ಅಪಘಾತದ ಬಾಬ್ತು ನನ್ನ ವಾಹನದ ಸರ್ವೆ ಮಾಡಿಸಿರುತ್ತೇನೆ. ಸದರಿ ವರದಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ. ಆ ಬಗ್ಗೆ ಸಂಸ್ಥೆಯವರನ್ನು ಕೇಳಬೇಕು. ಅಪಘಾತದಲ್ಲಿ ನಾನು ಅರ್ಜಿಯಲ್ಲಿ ತಿಳಿಸಿದಂತೆ ಚಣಗೆ ಯಾವುದೇ ಡ್ಯಾಮೇಜ್ ಗಳು ಆಗಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-9 ರಲ್ಲಿ ತಿಳಿಸಿದಂತೆ ಎಸ್.ಎಂ ಟ್ರಾವೆಲ್ಲರ್ ಡಿಸ್ಯೆನಿಂಗ್ ಗ್ಯಾರೇಜ್ ನಲ್ಲಿ ರಿಪೇರಿ ಮಾಡಿಸಿದ್ದೇ ಇಲ್ಲ ಎಂದರೆ ಸರಿಯಲ್ಲ. ನಿಪಿ-9 ಮತ್ತು 10ನ್ನು ಪ್ರಕರಣಕ್ಕಾಗಿ ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಆಂಬ್ಯುಲೆನ್ಸನ್ನು ಕೇರಳದ ಕಣ್ಣೂರಿಗೆ ಮತ್ತೊಂದು ವಾಹನದಲ್ಲಿ ಸಾಗಿಸಿದ ಬಗ್ಗೆ ಬಿಲ್ಲನ್ನು ಹಾಜರು ಪಡಿಸಿದ್ದೇನೆ. ನಿಪಿ-10 ರಲ್ಲಿ ತಿಳಿಸಿದಂತೆ ಸದರಿ ವಾಹನವನ್ನು ಸಾಗಾಟ ಮಾಡಲು ನನಗೆ ರೂ.20,000 ಹಣ ಖರ್ಚಾಗಿರುವುದಿಲ್ಲ ಎಂದರೆ ಸರಿಯಲ್ಲ. ಅಪಘಾತವಾದ ನಂತರ ಆಂಬ್ಯುಲೆನ್ಸ್ ಚಾಲನಾ ಸ್ಥಿತಿಯಲ್ಲಿರಲಿಲ್ಲ. ಅಪಘಾತ ವಾದ ನಂತರ ಮತ್ತೊಂದು ಆಂಬ್ಯುಲೆನ್ಸ್ ನ್ನು

ಪ್ರತೀ ದಿನ ರೂ.5000 ಬಾಡಿಗೆ ನೀಡಿ ಪಡೆದಿದ್ದು ಆ ಕುರಿತು ಸಂಸ್ಥೆಗೆ 2,50,000 ಹಣ ನಷ್ಟವಾಗಿದ್ದು ನನಗೆ ವೈಯಕ್ತಿಕವಾಗಿ ಗೊತ್ತಿರುವುದಿಲ್ಲ. ಆಂಬ್ಯುಲೆನ್ಸನ್ನು ರಿಪೇರಿ ಮಾಡಲು 44 ದಿನಗಳು ಆಗಿರುವ ಬಗ್ಗೆ ದಾಖಲೆ ಇರುವುದಿಲ್ಲ. ಆದರೆ ಈ ಬಗ್ಗೆ ರಶೀದಿ ಹಾಜರು ಪಡಿಸಿರುತ್ತೇನೆ. ಸದರಿ ವಾಹನಕ್ಕೆ 3 ಲಕ್ಷ ಹಣ ಖರ್ಚು ಮಾಡಿ ರಿಪೇರಿ ಮಾಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಹೆಚ್ಚಿನ ಪರಿಹಾರ ಪಡೆಯಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತದ ಬಾಪ್ತು ಅಂಬ್ಯುಲೆನ್ಸ್ ವಾಹನಕ್ಕೆ ಯಾವುದೇ ನಷ್ಟ ವುಂಟಾಗಿರುವುದಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

(ಸಾ.ಓ.ಹೇ.ಕೇ.ಸ.ಇ.ಎ.ಒ)

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಎಂ.ಎ.ಸಿ.ಟಿ, ಸುಳ್ಯ